ಓ ಎಸ್ ನಂಃ 40/2022
ಡಿ ಡಬ್ಲ್ಯೂ ಃ 1

ದಿಃ 09.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ. ಎಂ ಆರ್ ಆರ್ ವಕೀಲರಿಂದಃ**

ನಾನು 1976 ನೇ ಸಾಲಿನ ನವೆಂಬರ್ ಮಾಹೆಯಲ್ಲಿ ಹುಟ್ಟಿರುತ್ತೇನೆ. ನಾನು ದೇವಸ್ಥಾನದಲ್ಲಿ ಅರ್ಚಕ ವೃತ್ತಿ ಮತ್ತು ವ್ಯವಸಾಯವನ್ನು ಮಾಡುತ್ತೇನೆ. ನಾನು ತುಮಕೂರು ತಾಲ್ಲೂಕು, ಲಕ್ಕೇನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೇನೆ. 1 ನೇ ಪ್ರತಿವಾದಿ ರವರು ನನ್ನ ಅತ್ತೆ. 1 ನೇ ಪ್ರತಿವಾದಿಯನ್ನು ಹೊರತು ಪಡಿಸಿ ಉಳಿದ ಪ್ರತಿವಾದಿಗಳು ನನಗೆ ಸಾಮಾನ್ಯ ಅಧಿಕಾರ ಪತ್ರವನ್ನು ಬರೆದುಕೊಟ್ಟಿಲ್ಲ ಎಂದರೆ ಸರಿ. 4 ನೇ ಪ್ರತಿವಾದಿ ನನ್ನ ಧರ್ಮ ಪತ್ನಿ. ನನ್ನ ಮತ್ತು 4 ನೇ ಪ್ರತಿವಾದಿಯ ಮದುವೆ 2006 ನೇ ಸಾಲಿನಲ್ಲಿ ನೆರವೇರಿರುತ್ತದೆ. ನಾನು ಈ ದಾವೆಯ ವಾದಿಯಾದ ನಂಜುಂಡಯ್ಯ ರವರ ಹೆಂಡತಿಯಾದ ಜಯಮ್ಮ ರವರನ್ನು ನೋಡಿರುವುದಿಲ್ಲ. ವಾದಿಯ ಗಂಡನಾದ ನಂಜುಂಡಯ್ಯ ಮತ್ತು ನಂಜುಂಡಯ್ಯನವರ ತಮ್ಮ ನಾರಾಯಣಪ್ಪ ರವರನ್ನು ನಾನು ನೋಡಿರುವುದಿಲ್ಲ. ವಾದಿಯ ಗಂಡ ನಂಜುಂಡಯ್ಯ ನವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಾರಾಯಣಪ್ಪನವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಾರಾಯಣಪ್ಪನವರ ತಂದೆ ಹೆಸರು ತಮಗೆ ಗೊತ್ತು ಎಂದು ಹೇಳಿದ್ದೀರಿ ಸದರಿ ವಿಚಾರವನ್ನು ತಮಗೆ ಯಾರು ಹೇಳಿರುತ್ತಾರೆ ಎಂದರೆ ನಮ್ಮ ಅತ್ತೆಯವರು ನನಗೆ ಹೇಳಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ಮೂಲ ಪುರುಷ ಹೆಸರು ವೆಂಕಟರಮಣಯ್ಯ ಎಂದರೆ ಸರಿ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ತಮಗೆ ಖುದ್ದಾಗಿ ಗೊತ್ತಾ ಎಂದರೆ ಸಾಕ್ಷಿ ತಮ್ಮ ಅತ್ತೆಯವರ ಹೇಳಿಕೆಯ ಮೇರೆಗೆ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ವಾದಿಯು ದಾವಾ ಸ್ವತ್ತುಗಳಲ್ಲಿ ಭಾಗಾಂಶ ಬರಬೇಕೆಂದು ಪ್ರತಿವಾದಿಗಳ ವಿರುದ್ಧ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಕಲ್ಲಟ್ಟಿ ಲಕ್ಷ್ಮಮ್ಮ ರವರು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.

(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.